Sri Dharmasthala Manjunatheshwara College
(Autonomous), Ujire-574 240, Dakshina Kannada, Karnataka State
(Re-accredited by NAAC at "A" grade with CGPA 3.61 out of 4)

# BOS Meeting Minutes
# Department of Kannada
# 2018-19

08256 - 236220, 236101 (O) 236 220 sdmcollege@sdmcujire.in www.sdmcujire.in

**Sri Dharmasthala Manjunatheshwara College**
**(Autonomous), Ujire-574 240, Dakshina Kannada, Karnataka State**
*(Re-accredited by NAAC at "A" grade with CGPA 3.61 out of 4)*

## ಅಧ್ಯಯನ ಮಂಡಳಿ ಸಭೆ

ದಿ. 11.8.2018 ರಂದು ಕನ್ನಡ ವಿಭಾಗದಲ್ಲಿ ವಿಭಾಗದ ಅಧ್ಯಯನ ಮಂಡಳಿ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಈ ಕೆಳಗಿನ ಸದಸ್ಯರು ಹಾಜರಿದ್ದು, ಪದವಿ ತರಗತಿಗಳ ಕನ್ನಡ ಪಠ್ಯಕ್ರಮ ಬದಲಾವಣೆ ಕುರಿತು ಚರ್ಚಿಸಿ, ಅನುಮೋದಿಸಿದರು.

| | | |
|---|---|---|
| 1. ಡಾ. ಬಿ. ಪಿ. ಸಂಪತ್ ಕುಮಾರ್ | ಅಧ್ಯಕ್ಷರು | |
| 2. ಪ್ರೊ. ಕೃಷ್ಣಮೂರ್ತಿ | ವಿಷಯ ತಜ್ಞರು | |
| 3. ಡಾ. ಪ್ರಕಾಶ್ ಚಂದ್ರ ಬಿ. | ವಿ.ವಿ. ಪ್ರತಿನಿಧಿ | |
| 4. ಡಾ. ಸತೀಶ್ ಕುಮಾರ್ ಅಡ್ಯಂತಾಯ | ವಿಷಯ ತಜ್ಞರು | |
| 5. ಡಾ. ವಿಶ್ವನಾಥ ಪಟ್ಟಾಜೆ | ಉದ್ಯೋಗ ವಲಯದ ಪ್ರತಿನಿಧಿ | |
| 6. ಡಾ. ಮಾಧವ | ಹಳೆಯ ವಿದ್ಯಾರ್ಥಿ | |
| 7. ಡಾ. ಕೆ.ವಿ. ನಾಗರಾಜಪ್ಪ | ಸದಸ್ಯರು | |
| 8. ಶ್ರೀಮತಿ [illegible] | ಸದಸ್ಯರು | |
| 9. ಡಾ. ರಾಜಶೇಖರ | ಸದಸ್ಯರು | |
| 10. ಡಾ. ದಿವಾಕರ | ಸದಸ್ಯರು | |

08256 - 236220, 236101 (O) 236 220 sdmcollege@sdmcujire.in www.sdmcujire.in

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು(ಸ್ವಾಯತ್ತ), ಉಜಿರೆ-574240

## DEPARTMENT OF KANNADA

### Proceedings of BOS meeting

ದಿನಾಂಕ: 11.08.2018 ಬೆಳಿಗ್ಗೆ ಗಂಟೆ 10.30ಕ್ಕೆ ಕನ್ನಡ ವಿಭಾಗದ ಅಧ್ಯಯನ ಮಂಡಳಿ ಸಭೆಯನ್ನು ನಡೆಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಅಧ್ಯಯನ ಮಂಡಳಿಯ ಅಧ್ಯಕ್ಷರಾದ ಡಾ.ಬಿ.ಪಿ.ಸಂಪತ್ ಕುಮಾರ ಅವರು ವಹಿಸಿಕೊಂಡಿದ್ದರು.

**ಸಭೆಯ ಕಾರ್ಯಸೂಚಿ**

| AGENDA NO | PARTICULARS |
|---|---|
| **SDMC/KAN-BOS/2018-19/01/01** | ಸಭೆಯ ನಡೆವಳಿಗಳನ್ನು ಸಭೆಯ ಗಮನಕ್ಕೆ ತರುವುದು |
| **SDMC/KAN-BOS/2018-19/01/02** | ಹಿಂದಿನ ಸಭೆಯ ನಡೆವಳಿಗಳ ಓದು |
| **SDMC/KAN-BOS/2018-19/01/03** | ಹಿಂದಿನ ಸಭೆಯ ನಿರ್ಣಯಗಳ ಅನುಷ್ಠಾನ ವರದಿ |
| **SDMC/KAN-BOS/2018-19/01/04** | ಪಠ್ಯಕ್ರಮ ಪರಿಶೀಲನೆ ಮತ್ತು ಕೌಶಲಗಳ ಅಳವಡಿಕೆ |
| **SDMC/KAN-BOS/2018-19/01/05** | ಪ್ರಶ್ನೆಪತ್ರಿಕೆ ಪರಿಶೀಲನೆ |
| **SDMC/KAN-BOS/2018-19/01/06** | ವಿಭಾಗದ ಪರೀಕ್ಷಾ ಫಲಿತಾಂಶ ಪರಿಶೀಲನೆ |
| **SDMC/KAN-BOS/2018-19/01/07** | ಬೋರ್ಡ್ ಆಫ್ ಎಕ್ಸಾಮಿನರ್ಸ್ ಪಟ್ಟಿ ಪರಿಶೀಲನೆ |
| **SDMC/KAN-BOS/2018-19/01/08** | ಸಿ.ಬಿ.ಸಿ.ಎಸ್.ಅನುಷ್ಠಾನದ ಕುರಿತು |
| **SDMC/KAN-BOS/2018-19/01/09** | ಹೊಸ ಪಠ್ಯಕ್ರಮ/ಘಟಕ/ಭಾಗಗಳ ಅಳವಡಿಕೆ ಕುರಿತು |
| **SDMC/KAN-BOS/2018-19/01/10** | ಇತರ |

**ಸಭೆಯಲ್ಲಿ ಹಾಜರಿದ್ದ ಸದಸ್ಯರು**

| | | |
|---|---|---|
| 01 | ಡಾ.ಬಿ.ಪಿ.ಸಂಪತ್ ಕುಮಾರ | ಅಧ್ಯಕ್ಷರು |
| 02 | ಪ್ರೊ.ಕೃಷ್ಣಮೂರ್ತಿ | ವಿಷಯ ಪರಿಣತರು |
| 03 | ಡಾ.ಪ್ರಕಾಶ್ ಚಂದ್ರ ಬಿ. | ವಿ.ವಿ.ಪ್ರತಿನಿಧಿ |
| 04 | ಡಾ.ಗಿರೀಶ್ ಭಟ್ ಅಜಕ್ಕಳ | ವಿಷಯ ಪರಿಣತರು |
| 05 | ಡಾ.ವಿಶ್ವನಾಥ ಬದಿಕಾನ | ಉದ್ಯೋಗ ಸಂಬಂಧಿ ಪ್ರತಿನಿಧಿ |
| 06 | ಡಾ.ಮಾಧವ | ಹಿರಿಯ ವಿದ್ಯಾರ್ಥಿ |
| 07 | ಡಾ.ಕೆ.ವಿ.ನಾಗರಾಜಪ್ಪ | ಸದಸ್ಯರು |
| 08 | ಶ್ರೀಮತಿ ಬೋಜಮ್ಮ | ಸದಸ್ಯರು |
| 09 | ಡಾ.ರಾಜಶೇಖರ | ಸದಸ್ಯರು |
| 10 | ಡಾ.ದಿವಾಕರ | ಸದಸ್ಯರು |

ಗೈರು ಹಾಜರಿ– ಇಲ್ಲ

ಸಭೆಯ ಎಲ್ಲ ಗೌರವಾನ್ವಿತ ಸದಸ್ಯರನ್ನು ಆರಂಭದಲ್ಲಿ ಅಧ್ಯಯನ ಮಂಡಳಿಯ ಅಧ್ಯಕ್ಷರಾದ ಡಾ.ಬಿ.ಪಿ.ಸಂಪತ್ ಕುಮಾರ ಇವರು ಸ್ವಾಗತಿಸಿದರು.

**SDMC/KAN-BOS/2018-19/01/01**

**ಸಭೆಯ ನಡೆವಳಿಗಳಿಗೆ ಅನುಮೋದನೆ**

ಕನ್ನಡ ವಿಭಾಗದಲ್ಲಿ ದಿ. **11.08.2018ರಂದು ನಡೆದ** ಅಧ್ಯಯನ ಮಂಡಳಿ ಸಭೆಯ ನಡೆವಳಿಗಳನ್ನು ಅಧ್ಯಯನ ಮಂಡಳಿಯ ಅಧ್ಯಕ್ಷರಾದ ಡಾ.ಬಿ.ಪಿ.ಸಂಪತ್ ಕುಮಾರ್ ಅವರು ಸಬೆಯ ಗಮನಕ್ಕೆ ತಂದರು.

ಈ ನಡೆವಳಿಗಳಿಗೆ ಸಭೆ ಅನುಮೋದನೆ ನೀಡಿತು.

**SDMC/KAN-BOS/2018-19/01/02**

**ಹಿಂದಿನ ಸಭೆಯ ನಡೆವಳಿಗಳ ಓದು**

ದಿ.9.9.2-17 ರಂದು ನಡೆದ ಅಧ್ಯಯನ ಮಂಡಳಿ ಸಭೆಯ ನಿರ್ಣಯಗಳನ್ನು ಸಭೆಯ ಗಮನಕ್ಕೆ ತರಲಾಯಿತು.

ಈ ನಡೆವಳಿಗೆ ಸಭೆ ಅನುಮೋದನೆ ನೀಡಿತು

**SDMC/KAN-BOS/2018-19/01/03**

**ನಿರ್ಣಯಗಳ ಅನುಷ್ಠಾನ ವರದಿ ಕುರಿತು**

೧. ಪದವಿ ತರಗತಿಗಳಿಗೆ ನೂತನ ಕನ್ನಡ ಭಾಷಾ ಪಠ್ಯಕ್ರಮವನ್ನು ೨೦೧೮–೧೯ನೆಯ ಶೈಕ್ಷಣಿಕ ವರ್ಷದಿಂದ ಅಳವಡಿಸಿಕೊಳ್ಳಲು ಅಧ್ಯಯನ ಮಂಡಳಿ ಸಭೆಯಲ್ಲಿ ನಿರ್ಣಯಿಸಿದಂತೆ ಅನುಷ್ಠಾನಕ್ಕೆ ತರಲಾಗಿದೆ.

೨. ಪ್ರಶ್ನೆ ಪತ್ರಿಕೆ ಸ್ವರೂಪದಲ್ಲೂ ಬದಲಾವಣೆ ತರಲು ಸಭೆ ನೀಡಿದ್ದ ಸಲಹೆಯನ್ನು ಅನುಷ್ಠಾನಕ್ಕೆ ತರಲಾಗಿದೆ.

೩. ಪರೀಕ್ಷಾ ಮಂಡಳಿಯ ಪಟ್ಟಿಯನ್ನು ಪರಿಷ್ಕರಿಸಿ, ಸಭೆಯು ಸೂಚಿಸಿದ ಅರ್ಹ ಪ್ರಾಧ್ಯಾಪಕರ ಹೆಸರುಗಳನ್ನು ಹೊಸದಾಗಿ ಪಟ್ಟಿಯಲ್ಲಿ ಸೇರಿಸಿಕೊಳ್ಳಲಾಗಿದೆ.

೪. ಕನ್ನಡ ಐಚ್ಛಿಕ ವಿದ್ಯಾರ್ಥಿಗಳ ಕೌಶಲ್ಯಾಭಿವೃದ್ಧಿಗಾಗಿ ಆಡಳಿತ ಮಂಡಳಿಯ ಸೂಚನೆಯ ಪ್ರಕಾರ ಅಧ್ಯಯನ ಮಂಡಳಿಯಲ್ಲಿ ಕೈಕೊಂಡ ನಿರ್ಣಯದಂತೆ ಹಳಗನ್ನಡ ಕಾವ್ಯ ಕಲಿಕೆಗೆ 'ಕಾವ್ಯಂ ನಿಚ್ಚ ಮೊಸತು ಅರ್ಣವಂಬೊಲ್' ಎಂಬ ಪತ್ಯೇಕ ಪತ್ಯವೊಂದನ್ನು ಸಿದ್ಧಪಡಿಸಿದ್ದು, ಅದಕ್ಕೆ ಸಭೆಯ ಅನುಮೋದನೆ ಪಡೆಯಲಾಯಿತು

೫. ಪರೀಕ್ಷಾ ಫಲಿತಾಂಶವನ್ನು ಉತ್ತಮಪಡಿಸುವಲ್ಲಿ ಗಮನಹರಿಸಬೇಕೆಂಬ ಸಲಹೆಯಂತೆ, ರೆಮಿಡಿಯಲ್ ಡ್ರಿಲ್, ಅಸೈನ್‌ಮೆಂಟ್‌ಗಳನ್ನು ನೀಡುವುದುದರ ಮೂಲಕ ಅಧ್ಯಯನದಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಕಡೆಗೆ ವಿಶೇಷ ಗಮನಹರಿಸಿ ಫಲಿತಾಂಶದಲ್ಲಿ ಪ್ರಗತಿ ಸಾಧಿಸಲಾಗಿದೆ

ಈ ನಡೆವಳಿಯನ್ನು ಸಭೆ ಅನುಮೋದಿಸಿತು

**SDMC/KAN-BOS/2018-19/01/04**

**ಪಠ್ಯಕ್ರಮ ಪರಿಶೀಲನೆ ಮತ್ತು ಕೌಶಲಗಳ ಅಳವಡಿಕೆ**

ಈ ಮೇಲ್ಕಂಡ ನಡೆವಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಸಲಾಗಿ ಪಠ್ಯಕ್ರಮದಲ್ಲಿ ಈ ಶೈಕ್ಷಣಿಕ ವರ್ಷದಲ್ಲಿ ಯಾವುದೇ ಬದಲಾವಣೆಯ ಅವಶ್ಯಕತೆ ಇಲ್ಲ ಎಂದೂ ಆದರೆ ಈಗಿರುವ ಪಠ್ಯಕ್ರಮದಲ್ಲಿ ಈ ಕೆಳಗಿನ ಕೌಶಲಗಳನ್ನು ಅಳವಡಿಸಿಕೊಳ್ಳಬಹುದೆಂದು ಸೂಚಿಸಿಲಾಯಿತು

೧. **ಕನ್ನಡ ನುಡಿ ತಂತ್ರಾಂಶ ಕಲಿಕೆ**– ಕನ್ನಡ ಐಚ್ಛಿಕ ವಿದ್ಯಾರ್ಥಿಗಳು ಕಡ್ಡಾಯವಾಗಿ ಕನ್ನಡ ನುಡಿ ತಂತ್ರಾಂಶವನ್ನು ಕಲಿಯುವುದು ಹಾಗೂ ಅಂತಿಮ ವರ್ಷದ ಕನ್ನಡ ಐಚ್ಛಿಕ ವಿದ್ಯಾರ್ಥಿಗಳಿಗೆ ಕಿರುಪರೀಕ್ಷೆಗಳನ್ನು ಕಂಪ್ಯೂಟರ್ ಟೈಪಿಂಗ್ ಮೂಲಕವೇ ನಡೆಸುವುದು

೨. **ಭಾಷಾ ಕೌಶಲಾಭಿವೃದ್ಧಿ**
   - **ಮೌಖಿಕ ಅಭಿವ್ಯಕ್ತಿ ಕೌಶಲ**–ಕಥೆ, ಕಾದಂಬರಿ, ನಾಟಕ, ಕಾವ್ಯ, ಕಾವ್ಯಭಾಗ ಹಾಗೂ ಪ್ರಬಂಧ ಮೊದಲಾದ ಸಾಹಿತ್ಯ ಪ್ರಕಾರಗಳನ್ನು ವಿದ್ಯಾರ್ಥಿಗಳೇ ತರಗತಿಗಳಲ್ಲಿ ವಾಚಿಸುವುದು, ವಿವರಿಸಿ ವಿಶ್ಲೇಷಿಸುವುದು, ವಿಚಾರ ಮಂಡಿಸುವುದು ಇತ್ಯಾದಿ
   - **ಲಿಖಿತ ಅಭಿವ್ಯಕ್ತಿ ಕೌಶಲ**–ಕಥೆ, ಕವನ, ನಾಟಕ, ಪ್ರಬಂಧ, ವಿಮರ್ಶೆ ಮೊದಲಾದ ಸೃಜನಶೀಲ ಬರವಣಿಗೆಗೆ ಉತ್ತೇಜನ ನೀಡುವುದು. ಇದಕ್ಕೆ ಸಂಬಂಧಿಸಿದಂತೆ ತರಬೇತಿ ಕಾರ್ಯಾಗಾರಗಳನ್ನು ನಡೆಸಿ ಮಾಹಿತಿ ನೀಡುವುದು

೩. **ಅನುವಾದ ಕೌಶಲ**–ಅನುವಾದ ಕ್ಷೇತ್ರದಲ್ಲಿ ವಿಪುಲವಾ ಅವಕಾಶಗಳಿರುವುದರಿಂದ ವಿದ್ಯಾರ್ಥಿಗಳಿಂದ ಪಠ್ಯದಲ್ಲಿ ಇರುವ ಕಥೆ, ಕವನ, ಪ್ರಬಂಧ, ವೈಚಾರಿಕ ಲೇಖನ, ನಾಟಕ ಮೊದಲಾದ ಸಾಹಿತ್ಯ ಪ್ರಕಾರಗಳನ್ನು ತುಳು, ಕೊಡವ, ಅರಭಾಷೆ, ಕೊಂಕಣಿ, ಇಂಗ್ಲೀಷ್ ಇತ್ಯಾದಿ ಭಾಷೆಗಳಿಗೆ ಅನುವಾದ ಮಾಡುವ ಕೌಶಲ್ಯವನ್ನು ಕಲಿಸುವುದು

೪. **ಕನ್ನಡ ಪದಕೋಶ ಪರಾಮರ್ಶನ ಕೌಶಲ**–ಪದಕೋಶಗಳನ್ನು ಅಕಾರಾದಿಯಾಗಿ ಓದುವುದು, ಅವುಗಳನ್ನು ಶಾಸ್ತ್ರೀಯವಾಗಿ ಪರಾಮರ್ಶನ ಮಾಡುವುದು ಮೊದಲಾದ ಕಲೆಯನ್ನು ಕಲಿಸುವುದು. (ಈ ಬಗ್ಗೆ ಡಾ. ಪಾದೇಕಲ್ಲು ವಿಷ್ಣುಭಟ್ ಅವರ ಹಾಗೂ ಡಾ.ಕೃಷ್ಣಭಟ್ ಅವರ ನೆರವನ್ನು ಪಡೆದು ಒಂದು ದಿನದ ಅಧ್ಯಯನ ಕಮ್ಮಟವನ್ನು ನಡೆಸಬಹುದೆಂಬ ಸಲಹೆಯನ್ನು ಸಭೆ ನೀಡಿತು)

೫. **ಭಾವಕೋಶ ವಿಸ್ತರಣೆ**–ಸಾಮಾನ್ಯವಾಗಿ ನಮ್ಮ ಪಠ್ಯಕ್ರಮದ ಬೋಧನೆಯಲ್ಲಿ ವೈಚಾರಿಕ ಹಾಗೂ ಬುದ್ಧಿಪ್ರಧಾನವಾದ ವಿಚಾರಗಳ ಬೋಧನೆಗೆ ಹೆಚ್ಚು ಗಮನಹರಿಸುತ್ತೇವೆ. ಆದರೆ ಅವುಗಳಲ್ಲಿ ಅಭಿವ್ಯಕ್ತವಾಗಿರುವ ಭಾವನಾತ್ಮಕ ವಿಚಾರಗಳ ಕಡೆಗೂ ವಿಶೇಷವಾದ ಗಮನಹರಿಸಿ ವಿದ್ಯಾರ್ಥಿಗಳ ಭಾವಕೋಶ ವಿಸ್ತಾರಕ್ಕೆ ಹೆಚ್ಚು ಗಮನಕೊಡುವುದು.

Sri Dharmasthala Manjunatheshwara College
(Autonomous), Ujire-574 240, Dakshina Kannada, Karnataka State
(Re-accredited by NAAC at "A" grade with CGPA 3.61 out of 4)

೬. **ಹಳಗನ್ನಡ ಬೋಧನೆ**– ಹಳಗನ್ನಡ ಕಾವ್ಯ ಕಲಿಕೆಯಲ್ಲಿ ಹೊಸತಲೆಮಾರು ಆಸಕ್ತಿ ತೋರುವಂತಾಗಬೇಕೆಂಬ ಉದ್ದೇಶದಿಂದ ಮೂರೂ ವರ್ಷದ ಕನ್ನಡ ಐಚ್ಛಿಕ ವಿದ್ಯಾರ್ಥಿಗಳಿಗಾಗಿ **'ಕಾವ್ಯಂ ನಿಚ್ಚ ಮೊಸತು ಅರ್ಣವಂಬೊಲ್'** ಎಂಬ ಪತ್ಯೇಕ ಪಠ್ಯವೊಂದನ್ನು ಸಿದ್ಧಪಡಿಸಲಾಗಿದ್ದು, ಅಲ್ಲಿರುವ ಪದ್ಯಗಳನ್ನು ವಿದ್ಯಾರ್ಥಿಗಳು ವಾಚನ, ವ್ಯಾಖ್ಯಾನ ಮತ್ತು ಅವುಗಳ ಕಂಠಪಾಠ ಮಾಡುವ ಕೌಶಲವನ್ನು ಕಲಿಸುವುದು ಹಾಗೂ ಅಲ್ಲಿರುವ ಪದ್ಯಗಳನ್ನೇ ಭಾವಾನುವಾದಕ್ಕೆ ಆಯ್ಕೆ ಮಾಡಿಕೊಳ್ಳುವುದು

೭. **ವಿಮರ್ಶನ ಕೌಶಲ**–ವಿದ್ಯಾರ್ಥಿಗಳಲ್ಲಿ ವಿಮರ್ಶನ ಕೌಶಲವನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಮೂರೂ ವರ್ಷದ ಕನ್ನಡ ಐಚ್ಛಿಕ ವಿದ್ಯಾರ್ಥಿಗಳು ಕಡ್ಡಾಯವಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಕೃತಿ ಪ್ರೊ.ಟಿ.ಪಿ.ಅಶೋಕ ಅವರ 'ಕಥನ ಭಾರತಿ'ಯನ್ನು ಖರೀದಿಸಿ ಅವುಗಳಲ್ಲಿರುವ ಪ್ರಬಂಧಗಳನ್ನು ಓದಿ ತರಗತಿಗಳಲ್ಲಿ ವಿಚಾರಸಂಕಿರಣವನ್ನು ಏರ್ಪಡಿಸಿ ಅವುಗಳನ್ನು ಮಂಡಿಸುವಂತೆ ಮಾಡುವುದು.

ಈ ನಡೆವಳಿಯನ್ನು ಸಭೆ ಅನುಮೋದಿಸಿತು

**SDMC/KAN-BOS/2018-19/01/05**

**ಪ್ರಶ್ನೆಪತ್ರಿಕೆ ಪರಿಶೀಲನೆ**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈಗಿರುವ ಪ್ರಶ್ನೆಪತ್ರಿಕೆ ಮಾದರಿಯನ್ನು ಯಥಾವತ್ತಾಗಿ ಕಾಪಾಡಿಕೊಳ್ಳುವಂತೆ ಸಭೆ ಸೂಚನೆ ನೀಡಿತು

ಈ ನಡೆವಳಿಯನ್ನು ಸಭೆ ಅನುಮೋದಿಸಿತು

**SDMC/KAN-BOS/2018-19/01/06**

**ವಿಭಾಗದ ಪರೀಕ್ಷಾ ಪಲಿತಾಂಶ ಪರಿಶೀಲನೆ**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2016–17ನೆಯ ಸಾಲಿನ ಎರಡೂ ಸೆಮಸ್ಟರ್ ಪರೀಕ್ಷೆಗಳ ಫಲಿತಾಂಶವನ್ನು ಸಭೆಗೆ ಮಂಡಿಸಲಾಯಿತು. ವಿಭಾಗದ ಪಲಿತಾಂಶದ ಬಗೆಗೆ ಸದಸ್ಯರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಈ ನಡೆವಳಿಯನ್ನು ಸಭೆ ಅನುಮೋದಿಸಿತು

**SDMC/KAN-BOS/2018-19/01/07**

**ಪರೀಕ್ಷಾ ಮೌಲ್ಯಮಾಪಕರ ಪಟ್ಟಿ ಪರಿಶೀಲನೆ**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕಳೆದ ವರ್ಷ ಕನ್ನಡ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಡಾ.ಕುಮಾರ ಸ್ವಾಮಿಯವರು ಬೇರೆ ಕಾಲೇಜಿಗೆ ತೆರಳಿರುವುದರಿಂದ ಅವರ ಹೆಸರನ್ನು ಪಟ್ಟಿಯಿಂದ ಕೈಬಿಡಲು ನಿರ್ಣಯ ಕೈಗೊಳ್ಳಲಾಯಿತು. ಅಲ್ಲದೆ ನೂತನವಾಗಿ ಈ ಕೆಳಗಿನ ಅಧ್ಯಾಪಕರನ್ನು ಪಟ್ಟಿಗೆ ಸೇರಿಸಿಕೊಳ್ಳಲು ಸಭೆಯು ಅನುಮತಿ ನೀಡಿತು.

1. ಶ್ರೀ ರವಿರಾಜ್, ಸಹಾಯಕ ಕನ್ನಡ ಪ್ರಾಧ್ಯಾಪಕರು, ಬೆಸೆಂಟ್ ಕಾಲೇಜು, ಮಂಗಳೂರು
2. ಶ್ರೀ ಕಿಟ್ಟು ರಾಮಕುಂಜ, ಸಹಾಯಕ ಕನ್ನಡ ಪ್ರಾಧ್ಯಾಪಕರು, ಎಸ್.ವಿ.ಎಸ್.ಕಾಲೇಜು, ಬಂಟ್ವಾಳ
3. ಡಾ.ಸತೀಶ, ಸಹಾಯಕ ಕನ್ನಡ ಪ್ರಾಧ್ಯಾಪಕರು, ಎಸ್.ಡಿ.ಪಿ.ಟಿ., ಕಾಲೇಜು, ಕಟೀಲು
4. ಶ್ರೀ ರವಿಕುಮಾರ್, ಕನ್ನಡ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾರ್ ಸ್ಟ್ರೀಟ್ ಮಂಗಳೂರು

ಈ ನಡೆವಳಿಗೆ ಸಭೆಯು ಅನುಮೋದನೆ ನೀಡಿತು

**SDMC/KAN-BOS/2018-19/01/08**

**ಸಿ.ಬಿ.ಸಿ.ಎಸ್.ಅನುಷ್ಠಾನದ ಕುರಿತು**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ವಿಸ್ತೃತವಾದ ಚರ್ಚೆ ನಡೆಸಿ ಭಾಷಾ ವಿಷಯಕ್ಕೆ ಯಾವುದೇ ಮಹತ್ವ ಕಡಿಮೆಯಾಗದಂತೆ ನೋಡಿಕೊಂಡು ನೂತನ ಸಿ.ಬಿ.ಸಿ.ಎಸ್. ಪಠ್ಯಕ್ರಮವನ್ನು ಅಳವಡಿಸಿಕೊಳ್ಳಬಹುದೆಂದು ಸೂಚಿಸಿ ಈ ಕೆಳಗಿನಂತೆ ತೀರ್ಮಾನಿಸಲಾಯಿತು

"In view of CBCS to be implemented from the academic year 2019-20, it is resolved to adopt the new pattern and adhere to the modalities and regulations of Mangalore University in the Academic year(2019-20)".

ಈ ನಿರ್ಣಯವನ್ನು ಸಭೆಯು ಅನುಮೋದಿಸಿತು

**SDMC/KAN-BOS/2018-19/01/09**

**ಹೊಸ ಪಠ್ಯಕ್ರಮ/ಘಟಕ/ಭಾಗಗಳ ಅಳವಡಿಕೆ ಕುರಿತು**

- ಈ ಶೈಕ್ಷಣಿಕ ವರ್ಷದಲ್ಲಿ ಕಳೆದ ಅಧ್ಯಯನ ಮಂಡಳಿ ಸಭೆಯಲ್ಲಿ ನಿರ್ಣಯಿಸಿದಂತೆ ಕುವೆಂಪು ಅವರ 'ಸ್ಮಶಾನ ಕುರುಕ್ಷೇತ್ರ' ನಾಟಕವನ್ನು ಪ್ರಥಮ ಬಿ.ಎ.ಕನ್ನಡ ಐಚ್ಛಿಕ ತರಗತಿಗೆ 2019–20ನೆಯ ಶೈಕ್ಷಣಿಕ ವರ್ಷದಿಂದ ಪಠ್ಯವಾಗಿ ಅಳವಡಿಸಿಕೊಳ್ಳಲು ಸಭೆ ಅನುಮತಿಯನ್ನು ಮತ್ತೊಮ್ಮೆ ಕೋರಲಾಯಿತು.
- ಕನ್ನಡ ವಿಭಾಗವು ರೂಪಿಸಿಕೊಂಡಿರುವ ಅಲ್ಪಾವಧಿ ತರಬೇತಿ ಕೋರ್ಸ್‌ಗಳಾದ 'ಸ್ಪರ್ಧಾ ಕನ್ನಡ' ಹಾಗೂ 'ಚಲನಚಿತ್ರ ರಸಗ್ರಹಣ' ಎಂಬುವುಗಳ ಪಠ್ಯಕ್ರಮವನ್ನು ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಲಾಯಿತು

ಈ ನಿರ್ಣಯಗಳಿಗೆ ಸಭೆಯು ಅನುಮೋದನೆ ನೀಡಿತು.

**SDMC/KAN-BOS/2018-19/01/10**

**ಇತರ ವಿಷಯಗಳು**

- ಕಾಲೇಜಿನ ವಿದ್ಯಾರ್ಥಿ ಕೇಂದ್ರಿತ ಚಟುವಟಿಕೆಗಳಾದ ಪ್ರಚಲಿತ ವಿದ್ಯಮಾನಗಳು, ಚಿಂತನ, ಗುಂಪು ಚರ್ಚೆ, ಚರ್ಚಾ ತರಗತಿ, ವಿದ್ಯಾರ್ಥಿ ಸಂಶೋಧನ ಯೋಜನೆ, ಸ್ಟೂಡೆಂಟ್ ಫ್ಯಾಕಲ್ಟಿ ಮೊದಲಾದವುಗಳ ಬಗೆಗೆ ಸಭೆ ಮೆಚ್ಚುಗೆ ವ್ಯಕ್ತಪಡಿಸಿತು
- ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿ ಕನ್ನಡ ವಿಭಾಗದ ಆಶ್ರಯದಲ್ಲಿ ನಡೆಸಲಾಗುತ್ತಿರುವ ವಿಚಾರ ಸಂಕಿರಣ, ಕಮ್ಮಟ, ಅಧ್ಯಯನ ಪ್ರವಾಸಗಳು, ಕ್ಷೇತ್ರಕಾರ್ಯ ಮೊದಲಾದ ಚಟುವಟಿಕೆಗಳ ಕುರಿತು ಸಭೆ ತನ್ನ ಮೆಚ್ಚುಗೆ ವ್ಯಕ್ತಪಡಿಸಿತು
- ಆಡಳಿತ ಮಂಡಳಿಯು ಕಾಲೇಜಿನಲ್ಲಿ ಕನ್ನಡ ವಿಭಾಗಕ್ಕೆ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ನೀಡುತ್ತಿರುವ ಉದಾರವಾದ ಪ್ರೋತ್ಸಾಹವನ್ನು ಅಧ್ಯಯನ ಮಂಡಳಿಯ ಅಧ್ಯಕ್ಷರಾದ ಡಾ.ಬಿ.ಪಿ.ಸಂಪತ್ ಕುಮಾರ್ ಅವರು ನೆನಪಿಸಿಕೊಂಡರು. ಸಭೆಯ ಸದಸ್ಯರು ಆಡಳಿತ ಮಂಡಳಿಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿತು

ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ದಿ. 11.8.2018

ಡಾ.ಬಿ.ಪಿ.ಸಂಪತ್ ಕುಮಾರ
ಅಧ್ಯಕ್ಷರು, ಅಧ್ಯಯನ ಮಂಡಳಿ